


ಆಗೇದ. ಊರಾಗ ಹೋಗಬೇಕಾಗಿತ್ತು. ಗದ್ದಲದಾಗ ಬ್ಯಾಡ. ಯಾವುದರೆ ಹೋಟೆಲ್ಲಿಗೆ ಬಿಡು. ಊಟಾ ಪಾರ್ಸೆಲ್ ಮಾಡಿಸಿಕೊಂಡು ಹೋಗ್ತೇನಿ'ಎಂದೆ. ಬೆಳಿಗ್ಗೆ ತಿಂದಿದ್ದು, ಹೊಟ್ಟೆ ತಾಳ ಹಾಕುತ್ತಿತ್ತು.

'ಈ ಗದ್ದಲದಾಗ ಯಾವ ಹೋಟೆಲ್ಲಿಗೆ ಹೋಗ್ತೀರಿ ಮೇಡಮ್. ಎಲ್ಲಾ ಬಂದ್ ಮಾಡ್ಲಿಕ್ಕತ್ತಾರ. ತಿರಗಿ ಮನಿಗೆ ಹೋಗಿಬಿಡ್ರಿ. ನಾಳೆ ಊರಿಗೆ ಹೋಗೀರೆಂತ' ಎಂದ. 'ಛೆ! ಇಲ್ಲಪಾ. ಇವತ್ತು ಬಿಟ್ಟು ನಾಳೆ ಊರಿಗೆ ಮುಟ್ಟಲೇಬೇಕು. ಅಲ್ಲೆ ಎಲ್ಲಾರೂ ಕಾಯ್ಲಿಕ್ಕತ್ತಾರ' ಎಂದೆ. 'ಮತ್ತ... ಅನಗೋಳ ಕಡೆ ಹೋದ್ರ ತಿರಗಿ ಬರೋದು ತ್ರಾಸ ನೋಡ್ರಿ' ಎಂದು ತಾನೇ ಹೇಳಿದ. 'ಈಗ ಎಲ್ಲಿ ಬಿಡ್ಲಿ ಹೇಳ್ರಿ?' ಎಂದ. ಏನೂ ತೋಚದಂತಾಯಿತು. ಮನೆಗೆ ಹೋದರೂ ಮನೆಯಲ್ಲಿ ಯಾರಿಲ್ಲ. ಬೀಗ ಹಾಕಿದ್ದಾಗಿದೆ. ಗಲಾಟೆಯ ಸಮಯದಲ್ಲಿ ಹೋಟಲ್ ನಂಬುವಂತಿಲ್ಲ. ನೆಂಟರಿಷ್ಟರಲ್ಲೇ ಉಳಿಯಬೇಕು. ಆದರೆ ಬೆಂಗಳೂರಿನಲ್ಲಿ ಮತ್ತೊಂದು ಪ್ರವಾಸದ